17 ನೇ ಅಪರ ಲಘು ವ್ಯವಹಾರಗಳ ಹಾಗೂ ಎಸಿಎಂಎಂ ನ್ಯಾಯಾಲಯ, ಮೆಯೋಹಾಲ್ ವಿಭಾಗ, ಬೆಂಗಳೂರು (ಎಸ್.ಸಿ.ಸಿ.ಎಚ್-21)

ಸಿಸಿ ಸಂಖ್ಯೆ 60038/2018

DW1

ದಿನಾಂಕಃ 21.12.2021 ರಂದು ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರುಃ | ಕಾಲುರಾಮ್ ಪಟೇಲ್ |
| ತಂದೆಯ ಹೆಸರು | ದುರ್ಗಾರಾಮ್ ಪಟೇಲ್ |
| ವಯಸ್ಸು | 50 ವರ್ಷ |
| ವೃತ್ತಿ | ಎಲೆಕ್ಟ್ರಿಕಲ್ ಸೇವೆ |
| ವಾಸಃ | ಬೆಂಗಳೂರು |

ಮುಖ್ಯ ವಿಚಾರಣೆ ಅರೋಪಿ ಪರ ವಕೀಲರಿಂದಃ

1. ಪಿರ್ಯಾದುದಾರರು ಈ ಪ್ರಕರಣ ಹಾಕಿರುವ ವಿಚಾರ ನನಗೆ ಗೊತ್ತಿರಲಿಲ್ಲ. ಈ ಪ್ರಕರಣದ ಬಗ್ಗೆ ಪೋಲೀಸರು ನನಗೆ ದೂರವಾಣಿ ಕರೆ ಮಾಡಿದಾಗ ತಿಳಿಯಿತು. ಪಿರ್ಯಾದುದಾರರು ಕಳುಹಿಸಿದ ವಕೀಲರ ನೋಟೀಸು ನನಗೆ ಜಾರಿಯಾಗಿರುವುದಿಲ್ಲ. 2012 ರಿಂದ ನಾನು ಪಿರ್ಯಾದುದಾರರೊಂದಿಗೆ ವ್ಯವಹಾರವನ್ನು ಅರಂಬಿಸಿದ್ದೇನು. 2016 ರ ಡಿಸೆಂಬರ್ ತಿಂಗಳವರೆಗೂ ನಾನು ಪಿರ್ಯಾದುದಾರರೊಂದಿಗೆ ವ್ಯವಹಾರವನ್ನು ಮಾಡಿರುತ್ತೇನೆ. ಅದಾದ ನಂತರ ಪಿರ್ಯಾದುದಾರರೊಂದಿಗೆ ಯಾವುದೇ ವ್ಯವಹಾರ ನಾನು ಮಾಡಿರುವುದಿಲ್ಲ. ನಾನು ಪಿರ್ಯಾದುದಾರರೊಂದಿಗೆ ವ್ಯವಹಾರ ಮುಕ್ತಾಯ ಮಾಡುವಾಗ ಅವರಿಗೆ ಕೊಡಬೇಕಾಗಿದ್ದ ಎಲ್ಲಾ ಹಣವನ್ನು ಮರುಪಾವತಿ ಮಾಡಿರುತ್ತೇನೆ. ಚೆಕ್ಕಿನ ಮೂಲಕ ನಾನು ಪಿರ್ಯಾದುದಾರರಿಗೆ ಹಣವನ್ನು ಪಾವತಿಸಿರುತ್ತೇನೆ. ಚೆಕ್ಕು ನಗದೀಕರಣಗೊಳ್ಳದಿದ್ದಾಗ ಚೆಕ್ಕಿನ ಮೊತ್ತವನುನಾನು ನಗದಾಗಿ ಅವರಿಗೆ ಪಾವತಿ ಮಾಡಿ ಚೆಕ್ಕನ್ನು ಹಿಂದಕ್ಕೆ ಪಡೆದುಕೊಂಡಿರುತ್ತೇನೆ. ಅ ರೀತಿ ನಾನು ಹಣವನ್ನು ನಗದಾಗಿ ಪಾವತಿ ಮಾಡಿದ ಬಳಿಕ ಅವರಿಂದ ಪಡೆದ 22 ಚೆಕ್ಕುಗಳನ್ನು ಹಾಜರು ಪಡಿಸುತ್ತಿದ್ದು ಅವುಗಳನ್ನು ನಿಡಿ1 ರಿಂದ 22 ಎಂದು ಗುರುತಿಸಲಾಯಿತು.

2. ನಾನು ಪಿರ್ಯಾದುದಾರರೊಂದಿಗೆ ವ್ಯವಹಾರ ಅರಂಬಿಸಿದಾಗ 4 ಚೆಕ್ಕುಗಳನ್ನು ಬದ್ರತೆಯ ಸಲುವಾಗಿ ನೀಡಿದ್ದೇನು. ಸದರಿ ಚೆಕ್ಕನ್ನು ಹಿಂದಕ್ಕೆ ಕೊಡಿಯೆಂದು ಹಲವಾರು ಬಾರಿ ಪಿರ್ಯಾದುದಾರರ ಬಳಿ ಕೇಳಿರುತ್ತೇನೆ. ಅದರೆ ಅವರು ನನಗೆ ಅ ಚೆಕ್ಕುಗಳನ್ನು ಹಿಂದುರುಗಿಸಿರುವುದಿಲ್ಲ. ನನಗೆ ತಿಳುವಳಿಕೆ ಇರದ ಕಾರಣ ಅ ಚೆಕ್ಕುಗಳ ವಿರುದ್ಧ ಪಿರ್ಯಾದುದಾರರ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಳ್ಳಲಿಲ್ಲ. ಮತ್ತಿಕೆರೆ ವಿಳಾಸದಲ್ಲಿ ನಾನು ಯಾವುದೇ ಕಚೇರಿಯನ್ನು ಇಟ್ಟುಕೊಂಡಿರುವುದಿಲ್ಲ ಹಾಗೂ ಅಲ್ಲಿ ಯಾವುದೇ ವ್ಯವಹಾರವನ್ನು ನಡೆಸುತ್ತಿಲ್ಲ. ನನ್ನ

ಅಂಗಡಿಯಲ್ಲಿ ನರಸಿಂಹರೆಡ್ಡಿ ಎನ್ನುವವರು ಕೆಲಸ ಮಾಡುತ್ತಿಲ್ಲ. ನಾನು ಎಷ್ಟು ಹಣ ಬಾಕಿ ಕೊಡಬೇಕಾಗಿರುತ್ತದೆ ಎನ್ನುವ ಸಂಬಂದವಾಗಿ ಪಿರ್ಯಾದುದಾರರು ಈ ಪ್ರಕರಣವನ್ನು ದಾಖಲಿಸಿದಾಗ ಯಾವುದೇ ಇನ್ ವಾಯಿಸ್ ಗಳನ್ನು ಕೊಟ್ಟಿರಲಿಲ್ಲ. ಪಿರ್ಯಾದುದಾರರು ಹಾಜರು ಪಡಿಸಿರುವ ಕೆಲವು ಇನ್ ವಾಯಿಸ್ ಗಳಲ್ಲಿ ನನ್ನ ಸಹಿ ಇರುತ್ತದೆ ಕೆಲವೊಂದು ಇನ್ ವಾಯಿಸ್ ಗಳಲ್ಲಿ ನನ್ನ ಸಹಿಗಳು ಇರುವುದಿಲ್ಲ. ನನ್ನ ಸಹಿ ಇರದ ಇನ್ ವಾಯಿಸ್ ಗಳನ್ನು ಪಿರ್ಯಾದುದಾರರು ಸೃಷ್ಟಿಸಿ ಈ ಪ್ರಕರಣದ ಸಲುವಾಗಿ ಹಾಜರು ಪಡಿಸಿರುತ್ತಾರೆ. ನಾನು ಹಣ ಕೊಡಲು ಬಾಕಿ ಉಳಿಸಿಕೊಂಡರೆ ಬಡ್ಡಿ ಕೊಡಬೇಕೆನ್ನುವ ಯಾವುದೇ ಮಾತುಕತೆ ನನ್ನ ಹಾಗೂ ಪಿರ್ಯಾದುದಾರರ ನಡುವೆ ಅಗಿರಲಿಲ್ಲ. ನನ್ನ ಹಾಗೂ ಪಿರ್ಯಾದುದಾರರ ನಡುವೆ ಬಡ್ಡಿ ವಿಚಾರವಾಗಿ ಮೌಖಿಕವಾಗಿ ಅಥವಾ ಬರವಣಿಗೆಯ ಮೂಲಕ ಯಾವುದೇ ಕರಾರು ಅಗಿರಲಿಲ್ಲ. ನಾನು ಪಿರ್ಯಾದುದಾರರಿಗೆ ಯಾವುದೇ ಹಣವನ್ನು ಕೊಡಲು ಬಾಕಿ ಇರದ ಕಾರಣ ಬಡ್ಡಿ ಕೊಡುವ ಪ್ರಶ್ನೆ ಇರುವುದಿಲ್ಲ. 2016 ರ ನಂತರ ನನ್ನ ಹಾಗೂ ಪಿರ್ಯಾದುದಾರರ ನಡುವೆ ಯಾವುದೇ ವ್ಯವಹಾರ ಸಂಬಂದ ಇರಲಿಲ್ಲ. ನಾನು ಪಿರ್ಯಾದುದಾರರಿಗೆ ಖಾಲಿ ಸಹಿ ಮಾಡಿದ 4 ಚೆಕ್ಕುಗಳನ್ನು ಬದ್ರತೆಗಾಗಿ ನೀಡಿದ್ದೇನು. ಪಿರ್ಯಾದುದಾರರಿಗೆ ನಾನು ಯಾವುದೇ ಹಣ ಕೊಡಲು ಬಾಕಿ ಇರುವುದಿಲ್ಲ. ನನ್ನ ವಿರುದ್ಧ ಪಿರ್ಯಾದುದಾರರು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ಅದುದರಿಂದ ನನ್ನನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಪಿರ್ಯಾದುದಾರರು ಹಾಗೂ ಅವರ ಪರ ವಕೀಲರು ಗೈರು ಹಾಜರು ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಒ ಹೇ ಕೇ ಸ ಇದೆ

(ವಾಣಿ ಎ.ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು
ಮತ್ತು ಎಸಿಎಂಎಂ